# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ
## ಎಸ್.ಸಿ ಸಂಃ 98/2019

ವಡಗೇರಾ ಪೋಲೀಸ್ ಠಾಣೆ . .....ಫಿರ್ಯಾದಿ

ವಿರುದ್ಧ

ನಾಗರಾಜ ಮತ್ತು ಇತರರು .....ಆರೋಪಿತರು

**<u>ದೋಷಾರೋಪಣೆ</u>**

ನಾನು **ಬಿ.ಎಸ್.ರೇಖಾ, ಬಿ.ಎ.ಲಾ., ಎಲ್.ಎಲ್.ಎಮ್,** ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ, ಆರೋಪಿತರಾದಃ

1. ನಾಗರಾಜ ತಂದೆ ಸಿದ್ದಾರೂಢ ರಾಮದುರ್ಗ, ವಯಸ್ಸು 20 ವರ್ಷ, ಉದ್ಯೋಗಃ ವಿದ್ಯಾಭ್ಯಾಸ ವಾಸಃ ವಡಗೇರಾ ತಾಃ ಶಹಾಪೂರ ಜಿಃ ಯಾದಗಿರಿ.

2. ಸಚಿನ ತಂದೆ ತಿಮ್ಮಪ್ಪ ವಂದಲಿ, ವಯಸ್ಸು 18 ವರ್ಷ, ಉದ್ಯೋಗಃ ವಿದ್ಯಾರ್ಥಿ ವಾಸಃ ಹಾಲಗೇರಾ ತಾಃ ಶಹಾಪೂರ ಜಿಃ ಯಾದಗಿರಿ.

3. ಪರಶುರಾಮ ತಂದೆ ತಿಪ್ಪಣ್ಣ ಗೋವಿಂದೊರ, ವಯಸ್ಸು 22 ವರ್ಷ, ಉದ್ಯೋಗಃ ವಿದ್ಯಾರ್ಥಿ ವಾಸಃ ಹಾಲಗೇರಾ ತಾಃ ಶಹಾಪೂರ ಜಿಃ ಯಾದಗಿರಿ.

4. ಅಜೇಯ ತಂದೆ ಬಾಬು ವಂದಲಿ, ವಯಸ್ಸು 21 ವರ್ಷ, ಉದ್ಯೋಗಃ ವಿದ್ಯಾರ್ಥಿ ವಾಸಃ ಹಾಲಗೇರಾ ತಾಃ ಶಹಾಪೂರ ಜಿಃ ಯಾದಗಿರಿ.

5. ಮಲ್ಲಪ್ಪ ತಂದೆ ಬಸಲಿಂಗಪ್ಪ ಗೋವಿಂದೊರ, ವಯಸ್ಸು 22 ವರ್ಷ, ಉದ್ಯೋಗಃ ವಿದ್ಯಾರ್ಥಿ ವಾಸಃ ಹಾಲಗೇರಾ ತಾಃ ಶಹಾಪೂರ ಜಿಃ ಯಾದಗಿರಿ.

**ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.**

ವಡಗೇರಾ ಪೋಲೀಸಠಾಣಾ ಹದ್ದಿಯ ಪೈಕಿ, ಹಾಲಗೇರಾ ಗ್ರಾಮದಲ್ಲಿ 1ನೇ ಆರೋಪಿಯಾದ ನಾಗರಾಜ ನೀವು ಭಾಗಮ್ಮ ಇವರಿಗೆ ಮದುವೆ ಮಾಡಿಕೊಳ್ಳುತ್ತೇನೆ ಅಂತಾ ಹೇಳಿದಾಗ ಭಾಗಮ್ಮ ಇವರು ಒಪ್ಪದಿದ್ದಾಗ ಆರೋಪಿ-2 ರಿಂದ 5 ನೀವು ನನ್ನ ಸ್ನೆಹಿತನಿಗೆ ಪ್ರೀತಿ ಮಾಡದಿದ್ದರೆ ನಿನಗೆ ಎತ್ತಿಕೊಂಡು ಹೋಗುತ್ತೇವೆ ಎಂದು ಹೇಳಿದಾಗ ಭಾಗಮ್ಮ ಇವರು 1ನೇ ಆರೋಪಿಗೆ ಪ್ರೀತಿಸುತ್ತಿದ್ದು ನಂತರ 1ನೇ ಆರೋಪಿ ಮತ್ತು ಆರೋಪಿ-2 ರಿಂದ 5 ನೀವು ಭಾಗಮ್ಮಳಿಗೆ ನಮಗೆ ಸಂಬಂಧ ಇಲ್ಲ, ನಿನಗೆ ಮದುವೆ ಮಾಡಿಕೊಡಿಕೊಳ್ಳುವುದಿಲ್ಲ ಅಂತಾ ಹೇಳಿ ಅವರಿಗೆ ವಂಚಿಸಿದಿರಿ ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.417 ಸಂಗಡ ಕಲಂ 149 ರಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಭಾಗಮ್ಮ ಇವರಿಗೆ ಎಲ್ಲಿಯಾದರೂ ಹೋಗಿ ಹಾಳಬಾವಿಗೆ ಬಿದ್ದು ಸಾಯಿ ಅಂತಾ ಆತ್ಮಹತ್ಯೆಗೆ ದುಷ್ಪ್ರೇರಣೆ ಮಾಡಿದ್ದರಿಂದ ಭಾಗಮ್ಮ ಮನನೊಂದು ದಿನಾಂಕಃ 18.12.2017 ರಂದು ಸಾಯಂಕಾಲ 7.00 ಗಂಟೆಗೆ ಹಾಲಗೇರಾ ಗ್ರಾಮದ ತಮ್ಮ ವಾಸದ ಮನೆಯಲ್ಲಿ ಕ್ರಿಮಿನಾಶಕ ಎಣ್ಣೆ ಕುಡಿದು ಆತ್ಮಹತ್ಯೆ ಮಾಡಿಕೊಂಡಳು, ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.306 ಸಂಗಡ ಕಲಂ 149 ರಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ 05.02.2024 ರಂದು ಆದೇಶಿಸಿದ್ದೇನೆ.

**ಸ್ಥಳಃ ಯಾದಗಿರಿ**

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಯಾದಗಿರಿ**